KATK010000032021

ವಿ.ಮೊ.2/2021 ಪ್ರಾ ಸಾ 7

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ವಿಶೇಷ ಮೊಕದ್ದಮೆ.2/2021</u>**

ಪ್ರಾ.ಸಾ. : **7**

ದೋ.ಸಾ. : **12**

ದಿ.**27.02.2026**

| | |
|---|---|
| ಹೆಸರು | : ಪಿ. ಮೀನಾಕ್ಷಿ |
| ಗಂಡನ ಹೆಸರು | : ಜಿ.ಓ. ಕುಮಾರಪ್ಪ |
| ವಯಸ್ಸು | : **62** ವರ್ಷ |
| ಉದ್ಯೋಗ | : ನಿವೃತ್ತ ಗ್ರಾಮ ಲೆಕ್ಕಾಧಿಕಾರಿ |
| ವಾಸಸ್ಥಳ | : ಬೆಂಗಳೂರು |

ಸಾಕ್ಷಿಯನ್ನು ಕರೆಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u>**

1. 2018 ರಿಂದ 2022 ರವರೆಗೆ ನಾನು ಊರ್ಡಿಗೆರೆ ವೃತ್ತದಲ್ಲಿ ಗ್ರಾಮ ಲೆಕ್ಕಾಧಿಕಾರಿ ಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ.
2. ದಿನಾಂಕ 28.10.2020 ರಲ್ಲಿ ಸಿಇಎನ್ ಪೊಲೀಸ್ ಠಾಣೆಯ ಪಿಎಸ್ಐ ಅವರು ಪತ್ರವನ್ನು ಬರೆದು ಲಕ್ಷ್ಮಮ್ಮ ಕೋಂ ನರಸಿಂಹಯ್ಯರವರ ಮನೆಯ ಖಾತಾ ಎಕ್ಸ್ ಟ್ರಾಕ್ಟ್ ಅನ್ನು ಕೊಡಲು ಕೇಳಿದ್ದರು. ಆ ಪತ್ರವನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ **33** ಎಂದು ಗುರುತಿಸಲಾಯಿತು. ಅದೇ ದಿನ ಲಕ್ಷ್ಮಮ್ಮ ಕೋಂ ನರಸಿಂಹಯ್ಯ ಇವರ ಹೆಸರಿನಲ್ಲಿದ್ದ ಊರ್ಡಿಗೆರೆ ಗ್ರಾಮದ ಸರ್ವೆ.ನಂ.**115/1** ಮತ್ತು ನಾರಾಯಣಪ್ಪ ಬಿನ್ ಪಾಪಣ್ಣ ಅವರ ಹೆಸರಿನಲ್ಲಿರುವ ಸರ್ವೆ.ನಂ.**115/3** ರ ಖಾತೆ ಪಹಣಿಯನ್ನು ನೀಡಿರುತ್ತೇನೆ. ಆ ಪತ್ರವನ್ನು ನೋಡುತ್ತಿದ್ದು ಅದನ್ನು ನಿಶಾನೆ ಪಿ**34** ಎಂದು, ಅದರಲ್ಲಿರುವ ನನ್ನ ಸಹಿಯನ್ನು ನಿಶಾನೆ ಪಿ**34**(ಎ) ಎಂದು ಗುರುತಿಸಲಾಯಿತು. ಆ ಪಹಣಿಗಳನ್ನು ನೋಡುತ್ತಿದ್ದು ಅವುಗಳನ್ನು ನಿಶಾನೆ ಪಿ.**35** ಮತ್ತು ಪಿ.**36** ಎಂದು ಗುರುತಿಸಲಾಯಿತು.

**<u>ಪಾಟೀ ಸವಾಲು ಶ್ರೀ.ಹೆಚ್.ವಿ.ರಂಗನಾಥ ರೆಡ್ಡಿ, ವಕೀಲರಿಂದ 2 ನೇ ಆರೋಪಿತನ ಪರವಾಗಿಃ</u>**

**3.** **2020** ರಲ್ಲಿ ಶಂಕರ್ ರವರು ಉಪ ತಹಸೀಲ್ದಾರ್ ಆಗಿದ್ದರು. ಉಪ ತಹಸೀಲ್ದಾರ್ ರವರು ನನಗೆ ಮೌಖಿಕವಾಗಿ ಪಹಣಿ ಪತ್ರಿಕೆ ಕೊಡಲು ಹೇಳಿದ್ದರಿಂದ ನಾನು ಕೊಟ್ಟಿದ್ದೇನೆ. ನಾರಾಯಣಪ್ಪ ಬಿನ್ ಪಾಪಣ್ಣನವರ ಹೆಸರಿಗೆ ಉರ್ಡಿಗೆರೆ ಗ್ರಾಮದಲ್ಲಿ ಸಾಕಷ್ಟು ಆಸ್ತಿಗಳು ಇವೆ ಎಂದರೆ ನನಗೆ ಗೊತ್ತಿಲ್ಲ. ಉಪ ತಹಸೀಲ್ದಾರ್ ರವರು ಕೊಟ್ಟ ಪತ್ರದಲ್ಲಿ ಸರ್ವೆ ನಂಬರನ್ನು ನಮೂದಿಸಿಲ್ಲ. ಸ.ನಂ.**115**ಃ**1** ಮತ್ತು **115**ಃ**3** ರ ಪಹಣಿ ಕೊಡಲು ಉಪ ತಹಸೀಲ್ದಾರ್ ರವರು ಹೇಳಿದರು. ಆ ಎರಡೂ ಸ್ವತ್ತುಗಳು ಮಳೆ ಆಧಾರಿತ ಸ್ವತ್ತುಗಳು. ನಾನು ಸದರಿ ಆಸ್ತಿಯನ್ನು ಸ್ವತಃ ನೋಡಿಲ್ಲ, ಆದ್ದರಿಂದ ಅಲ್ಲಿ ಯಾವ ಬಣ್ಣದ ಮಣ್ಣು ಇದೆ ಎಂದು ಹೇಳಲಾಗುವುದಿಲ್ಲ. ಇಂತಹ ಸರ್ವೆನಂಬರಿನ ಪಹಣಿ ಕೊಡಿ ಎಂದು ಕೇಳಿದ್ದಕ್ಕೆ ನಾನು ಕೊಟ್ಟಿದ್ದೇನೆ.

**<u>ಪಾಟೀ ಸವಾಲು ಶ್ರೀ.ಜಿ.ಎಸ್.ರೆಹಮಾನ್, ವಕೀಲರಿಂದ 1 ನೇ ಆರೋಪಿತನ ಪರವಾಗಿಃ</u>**

ಪಾಟೀ ಸವಾಲು ಇಲ್ಲ ಎಂದು ವಕೀಲರು ಹೇಳಿರುತ್ತಾರೆ.

ಮರು ವಿಚಾರಣೆ ಃ ಇಲ್ಲ

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ**.**

ಸಹಿ**/-**
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು